Date : 04.12.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಪಾಟೀ ಸವಾಲು – ಎದುರುದಾರ ಪರ ಶ್ರೀ ಜಿ.ಎಸ್.ಎ ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನಿನ ಸರ್ವೆ ನಂ. 79/8 ಇದ್ದು ಅದರಲ್ಲಿ 18 ಗುಂಟೆ ಜಮೀನನ್ನು ಎದುರುದಾರರು ಭೂಸ್ವಾಧೀನ ಪಡಿಸಿಕೊಂಡಿರುತ್ತಾರೆ . ಸದರಿ ಜಮೀನು ಖುಷ್ಕಿ ಜಮೀನು ಎಂದರೆ ಸರಿ. ಸದರಿ ಜಮೀನನ್ನು ಎದುರುದಾರರು ಭೂಸ್ವಾಧೀನ ಪಡಿಸಿಕೊಂಡ ಬಾಬ್ತು ಪರಿಹಾರವೆಂದು ನನಗೆ ಈಗಾಗಲೇ ರೂ.38,87,652/– ಹಣ ಪಾವತಿಸಿರುವರು ಎಂದರೆ ಸರಿ. ನಾನು ಈ ಕೇಸಿನಲ್ಲಿ ಹಾಜರುಪಡಿಸಿದ ನಿಪಿ–3 ರಿಂದ 15 ಎಂದು ಗುರುತಿಸಿದ ದಾಖಲೆಗಳಿಗೂ ಮತ್ತು ಈ ಕೇಸಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ . ನಿಪಿ–3 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಯು ಭೂಪರಿವರ್ತನೆ ಆಗಿರುವ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ–4 ಮತ್ತು 5 ಎಂದು ಗುರುತಿಸಿದ ದಾಖಲೆಗಳು ನಿಪಿ–3 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ.

2) ನಿಪಿ–6 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಯು ಭೂಪರಿವರ್ತನೆ ಆಗಿರುವ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ–7 ಮತ್ತು 8 ಎಂದು ಗುರುತಿಸಿದ ದಾಖಲೆಗಳು ನಿಪಿ–6 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ನಿಪಿ–9 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಯು ಭೂಪರಿವರ್ತನೆ ಆಗಿರುವ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ನಿಪಿ–10 ಮತ್ತು 11 ಎಂದು ಗುರುತಿಸಿದ ದಾಖಲೆಗಳು ನಿಪಿ–9 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಆಸ್ತಿಯಲ್ಲಿ ಮಾಡಲಾಗಿದೆ ಎಂದು ಹೇಳಿದ ಸೈಟುಗಳಿಗೆ ಸಂಬಂಧಿಸಿದಂತೆ ಇರುವ ದಾಖಲೆಗಳು ಎಂದರೆ ಸರಿ. ನಿಪಿ–12 ಎಂದು ಗುರುತಿಸಿದ ನಕಾಶೆಯು ಗೋಣೂರು ಗ್ರಾಮಕ್ಕೆ ಸೇರಿದ ನಕಾಶೆಯ ದೃಢೀಕೃತ ಪ್ರತಿ ಎಂದರೆ ಸರಿ. ನಿಪಿ–13 ಎಂದು ಗುರುತಿಸಿದ ಪೋಟೋದಲ್ಲಿ ಕಾಣುವ ಸೈಟುಗಳು ನಿಪಿ–9 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಜಮೀನಿನಲ್ಲಿ ಮಾಡಿರುವ ಸೈಟುಗಳು ಇರುತ್ತವೆ.

3) ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನು ಈಗಲೂ ವ್ಯವಸಾಯಕ್ಕೆ ಉಪಯೋಗಿಸುವ ಜಮೀನು ಎಂದರೆ ಸರಿ. ವ್ಯವಸಾಯಕ್ಕೆ ಉಪಯೋಗಿಸುವ ಜಮೀನು ಮತ್ತು ಭೂಪರಿವರ್ತನೆಗೊಂಡಿರುವ ಜಮೀನು ಬೇರೆ ಬೇರೆ ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಜಮೀನಿಗೂ ಮತ್ತು ನಿಪಿ–3, 6, 9 ಎಂದು ಗುರುತಿಸಿದ ದಾಖಲೆಯಲ್ಲಿ ಕಾಣುವ ಜಮೀನಿಗೂ ಯಾವುದೇ ರೀತಿಯ ಹೊಂದಾಣಿಕೆ ಇರುವುದಿಲ್ಲ ಎಂದು ಸೂಚಿಸಲಾಗಿ, ಆ ದಾಖಲೆಗಳಲ್ಲಿ ಕಾಣುವ

ಜಮೀನುಗಳು ಅರ್ಜಿಯಲ್ಲಿ ಕಾಣಿಸಿದ ನನ್ನ ಜಮೀನಿಗೆ ಸಮೀಪದಲ್ಲಿ ಇರುವವು ಎಂದು ಸಾಕ್ಷಿ ಹೇಳುತ್ತಾರೆ. ಯಾವುದೇ ಒಂದು ಜಮೀನನ್ನು ಭೂಪರಿವರ್ತನೆ ಮಾಡಿ ಆ ಜಮೀನಿನಲ್ಲಿ ಸೈಟುಗಳನ್ನು ಮಾಡುವಾಗ, ಅದಕ್ಕೆ ಆದಂತಹ ಷರತ್ತುಗಳನ್ನು ವಿಧಿಸಿ ಭೂಪರಿವರ್ತನೆ ಆದೇಶ ಕೊಡುವರು ಮತ್ತು ಆ ಷರತ್ತುಗಳನ್ನು ಪೂರೈಸಿದ ನಂತರವೇ ಜಮೀನಿನಲ್ಲಿ ಸೈಟುಗಳನ್ನು ಮಾಡಬೇಕಾಗುವುದು ಎಂದರೆ ಸರಿ. ಯಾವುದೇ ಒಂದು ಜಮೀನಿನಲ್ಲಿ ಸೈಟುಗಳನ್ನು ಮಾಡಬೇಕಾದಲ್ಲಿ ಸಂಬಂಧಿಸಿದ ಇಲಾಖೆಯಿಂದ ಆ ಬಗ್ಗೆ ಸೂಕ್ತ ಆದೇಶ ಪಡೆಯಬೇಕಾಗುವುದು ಎಂದರೆ ಸರಿ. ನನ್ನ ಮಾಲೀಕತ್ವದ ಜಮೀನಿನ ಮೇಲೆ ನನಗೆ ಮಾತ್ರ ಹಕ್ಕಿದ್ದು ಮತ್ತು ಬೇರೆ ಜಮೀನಿನಲ್ಲಿ ಸೈಟುಗಳನ್ನು ಮಾಡಿದಲ್ಲಿ ಮತ್ತು ಆ ಸೈಟುಗಳನ್ನು ಖರೀದಿಸಿದಲ್ಲಿ, ಆಗ ಆ ಸೈಟಿನ ಮಾಲೀಕರಿಗೆ ಆ ಜಮೀನಿನ ಮೇಲೆ ಹಕ್ಕು ಬರುವುದು ಮತ್ತು ಆ ಜಮೀನು ಸಾರ್ವಜನಿಕ ಉಪಯೋಗಕ್ಕೆ ಕೂಡ ಬರುವುದು ಎಂದರೆ ಸರಿ.

4) ಎದುರುದಾರರು ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನನ್ನು ಸ್ವಾಧೀನ ಪಡಿಸಿಕೊಂಡ ಬಾಬ್ತು ನನಗೆ ಪರಿಹಾರ ನೀಡುವ ಸಮಯದಲ್ಲಿ, ಆ ಆಸ್ತಿಯ ಮೌಲ್ಯವನ್ನು ನಿರ್ಧರಿಸಲು ಅರ್ಹ ಇರುವ ವ್ಯಕ್ತಿ ಮತ್ತು ಇಲಾಖೆಯಿಂದ ಆ ಬಗ್ಗೆ ವರದಿ ಹಾಗೂ ದಾಖಲೆಗಳನ್ನು ಪಡೆದು ಆ ನಂತರವೇ ಸೂಕ್ತವಾದ ಮೌಲ್ಯವನ್ನು ಆಸ್ತಿಗೆ ನಿರ್ಧರಿಸಿ ನನಗೆ ಈಗಾಗಲೇ ಕಾನೂನು ಬದ್ಧವಾಗಿ ಪರಿಹಾರ ಕೊಟ್ಟಿದ್ದು, ಅದು ಸೂಕ್ತ ಇರುವುದು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯವಾಗಿ ಎದುರುದಾರರು ಪ್ರಾಥಮಿಕ ಅಧಿಸೂಚನೆಯನ್ನು ದಿಃ 05.03.2020 ರಂದು ಹೊರಡಿಸಿರುವರು ಎಂದು ಸೂಚಿಸಲಾಗಿ, ಇರಬಹುದೆಂದು ಸಾಕ್ಷಿ ಹೇಳುತ್ತಾರೆ.

5) ಮೇಲೆ ಹೇಳಿದಂತೆ ಎದುರುದಾರರು ನನ್ನ ಮಾಲೀಕತ್ವದ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಾಬ್ತು ನನಗೆ ಪರಿಹಾರ ನೀಡಿದ್ದು, ಅದರಲ್ಲಿ ಹಿಡಿಗಂಟು ಎಂದು ಕೂಡ ಹಣ ಸೇರಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಭೂಸ್ವಾಧೀನ ಪಡಿಸಿಕೊಂಡ ಬಾಬ್ತು ಈಗಾಗಲೇ ನನಗೆ ಕಾನೂನ ಬದ್ಧವಾಗಿ ಸೂಕ್ತ ಪರಿಹಾರ ನೀಡಿದ್ದು, ಆದರೂ ಕೂಡ ಯಾವುದೇ ಸೂಕ್ತ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸದೇ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅಂಶದ ಮುಖ್ಯವಿಚಾರಣೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆನು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ *ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ.*